# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 3372 /2022

**ಚಾಸಾ :- 01 / ಪ್ರಾಸಾ :- 01**

| | |
|---|---|
| ಹೆಸರು | ಸುಮ ಎನ್ |
| ಗಂಡನ ಹೆಸರು | ಸೃಜನ್ ಗೌಡ |
| ವಯಸ್ಸು | 29 |
| ಉದ್ಯೋಗ | ಪಶುವೈದ್ಯಾಧಿಕಾರಿ |
| ವಿಳಾಸ | ಫಾರೆಸ್ಟ್ ಗೇಟ್ ಬೆಂಗಳೂರು |

**ದಿನಾಂಕ: 12.01.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-2 ರಿಂದ 12 ರವರು ಪರಿಚಯ ಇರುತ್ತಾರೆ. 1 ನೇ ಆರೋಪಿ ನನ್ನ ಗಂಡ ಹಾಗೂ 2 ಮತ್ತು 3 ನೇ ಆರೋಪಿಗಳು ನನ್ನ ಮಾವ ಮತ್ತು ಅತ್ತೆ.

ದಿನಾಂಕ 04.11.2020 ರಂದು ನನ್ನ ಹಾಗೂ 1 ನೇ ಆರೋಪಿಯ ವಿವಾಹವು ಜರುಗಿಸರುತ್ತದೆ. 1 ನೇ ಆರೋಪಿಯು ನನಗೆ ಸೆಪ್ಟೆಂಬರ್ ತಿಂಗಳಿನಲ್ಲಿ ನಾನು ಮಾಗಡಿಯ ಕೆಎಂಎಫ್ ಗೆ ಪಶುವೈಧ್ಯಾಧಿಕಾರಿಯಾಗಿ ಸೇರಿಕೆಯಾದಾಗ ನನಗೆ ಪರಿಚಯ ಆಗಿರುತ್ತಾರೆ. 1 ನೇ ಆರೋಪಿಯು ನನ್ನ ಸೀನಿಯರ್ ಆಗಿದ್ದರು. ನಂತರ ನನ್ನ ತಮ್ಮ ಇದ್ದ ಕಾರಣ ನಮಗೆ ಮದುವೆಗೆ ಪ್ರಪೋಸಲ್ ಬಂದಿದ್ದ ಅದರಂತೆ ಜುಲೈ ಅಥವಾ ಆಗಸ್ಟ್ ತಿಂಗಳಲ್ಲಿ ನಿಶ್ಚಿತಾರ್ಥ ಇಟ್ಟುಕೊಳ್ಳಬೇಕು ಎಂದು ಪ್ಲಾನ್ ಮಾಡಿದ್ದೆವು, ಆದರೆ ನನ್ನ ತಮ್ಮ

ಜುಲೈ 6 ನೇ ತಾರೀಕಿನಂದು ಮರಣ ಹೊಂದಿದ ಕಾರಣ ನಿಶ್ಚಿತಾರ್ಥ ವಿಚಾರವನ್ನು ತಡೆ ಹಿಡಿದಿದ್ದೆವು. ನಂತರ ಆರೋಪಿಗಳೆ ನಮಗೆ ದೇವಸ್ಥಾನದಲ್ಲಿ ಸಿಂಪಲ್ ಆಗಿ ಮದುವೆ ಮಾಡಿಕೊಡಿ ಎಂದು ಅವರ ಕಡೆಯವರನ್ನು ಕರೆದುಕೊಂಡು ಬಂದು ಒತ್ತಾಯ ಮಾಡಿದ್ದರಿಂದ ನಮ್ಮ ಮಾವನವರಾದ ಚಾಸಾ-4 ರವರು ಒಪ್ಪಿ ತಮ್ಮ ಊರಾದ ಯಲಿಯೂರಿನಲ್ಲಿ ನಿಶ್ಚಿತಾರ್ಥವನ್ನು ಮಾಡಿಸಿದ್ದರು. ನಂತರ ದಿನಾಂಕ 04.11.2020 ರಂದು ಆದಿಚುಂಚನಗಿರಿ ದೇವಸ್ಥಾನದಲ್ಲಿ ಸಿಂಪಲ್ ಆಗಿ ವಿವಾಹ ಆಗಿರುತ್ತದೆ. ನಂತರ ಮದುವೆಯಾಗಿ 1 ತಿಂಗಳ ಕಾಲ ನಾನು ಮತ್ತು 1 ನೇ ಆರೋಪಿಯು ಫಾರೆಸ್ಟ್ ಗೇಟ್ ಬಳಿ ಇದ್ದ ನಮ್ಮ ಮನೆಯಲ್ಲೆ ವಾಸ ಇದ್ದೆವು. ಆ ಸಮಯದಲ್ಲೆ 1 ನೇ ಆರೋಪಿಯ ಬಿಹೇವಿಯರ್ ಬದಲಾವಣೆ ಕಾಣಿಸಿತು. ಮದುವೆಯಾದ ತಿಂಗಳಿನಲ್ಲೆ ಮನೆಯ ಖರ್ಚಿಗಾಗಿ ಹಣವನ್ನು ನಾನು 1 ನೇ ಆರೋಪಿಯ ಖಾತೆಗೆ ಜಮಾ ಮಾಡಬೇಕಾಗಿತ್ತು. 1 ನೇ ಆರೋಪಿಯ ತಂದೆ ತಾಯಿ ಯವರು ನನ್ನ ತಂದೆ ತಾಯಿಯಿಂದ ಬೇರೆ ಬರಲು 1 ನೇ ಆರೋಪಿಗೆ ಪ್ರಚೋದನೆ ಮಾಡುತ್ತಿದ್ದರು. ಆದ ಕಾರಣ ನನ್ನ ತಂದೆಯವರು ನೀವು ಮಾಗಡಿಯಲ್ಲೆ ಕೆಲಸ ಮಾಡುತ್ತಿರುವುದರಿಂದ ನಿಮಗೆ ಅನುಕೂಲವಾಗುವಂತೆ ಮಾಗಡಿಯಲ್ಲೆ ಮನೆಯನ್ನು ಮಾಡಿಕೊಳ್ಳಲು ಹೇಳಿದ್ದರು. ನಂತರ ಮಾಗಡಿಯ ಕಲ್ಯಾ ಗೇಟ್ ? ಶ್ರೀನಿಧಿ ಲೇಔಟ್ ನಲ್ಲಿ ರಾಮಣ್ಣ ಎಂಬುವವರ ಮನೆಯಲ್ಲಿ ಬಾಡಿಗೆ ಮನೆಯನ್ನು ಮಾಡಿದ್ದೆವು. ಆ ದಿನ ನನ್ನ ತಂದೆ ತಾಯಿಯವರು ಬಂದು ನಮಗೆ ಏನು ವಸ್ತುಗಳು ಬೇಕಾಗಿದ್ದು ಅವುಗಳನ್ನು ಕೊಡಿಸಿದ್ದರು. ನಮ್ಮ ಮದುವೆಯಾದ ಒಂದು ತಿಂಗಳಿಗೆ ಸದರಿ ಬಾಡಿಗೆ ಮನೆಯನ್ನು ಮಾಡಿದ್ದೆವು. ನಂತರ ನನ್ನ ಹಾಗೂ 1 ನೇ ಆರೋಪಿಯ ನಡುವೆ ವ್ಯತ್ಯಾಸಗಳು ಜಾಸ್ತಿ ಆಗುತ್ತಾ ಬಂದಿತ್ತು. ನನ್ನ ಮನೆಯವರನ್ನು ಬೇಟಿ ಮಾಡಬಾರದು ಹಾಗೂ ಸಂಪರ್ಕಿಸಬಾರದು ಎಂದು 1 ನೇ ಆರೋಪಿಯು ತುಂಬಾ ಒತ್ತಾಯ ಮಾಡುತ್ತಿದ್ದರು. ಒಂದೇ ಕಡೆಯಿಂದ ನಾನು ಮತ್ತು 1 ನೇ ಆರೋಪಿಯು ಕೆಲಸ ಮಾಡುತ್ತಿದ್ದರಿಂದ ನನ್ನ ತಂದೆ

ತಾಯಿಯವರನ್ನು ಬೇಟಿ ಮಾಡಲು ಬಿಡುತ್ತಿರಲಿಲ್ಲ. ನಮ್ಮ ಮನೆಯ ಏನೇ ವಿಚಾರ ಬಂದರೂ ನಕಾರಾತ್ಮಕವಾಗಿ ಹೇಳುತ್ತಿದ್ದರು. ನನ್ನ ತಮ್ಮನ ಮರಣ ಹೊಂದಿದ ವಿಚಾರವನ್ನು ತುಂಬಾ ಜಾಸ್ತಿ ಮಾಡಿ ಅವನು ನನಗೆ ತೊಂದರೆ ಕೊಡುತ್ತಿದ್ದಾನೆ ಎಂದು ಹೇಳುತ್ತಿದ್ದರು. ಎಷ್ಟೊ ರಾತ್ರಿಗಳು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಯಾಗಿರುತ್ತದೆ. ಮದ್ಯರಾತ್ರಿ 1 ನೇ ಆರೋಪಿ ಬ್ಯಾಗನ್ನು ಪ್ಯಾಕ್ ಮಾಡಿಕೊಂಡು ನಾನು ಮಂಡ್ಯಕ್ಕೆ ಹೋಗುತ್ತೇನೆ ನೀನು ಏನು ಬೇಕಾದರೂ ಮಾಡಿಕೊ ಎಂದು ಹೇಳುತ್ತಿದ್ದನು. 1 ನೇ ಆರೋಪಿಯು ಯಾವ ಹಬ್ಬಹರಿದಿನಗಳಲ್ಲೂ ಬೆಂಗಳೂರಿನ ನಮ್ಮ ಮನೆಗೆ ಬರುತ್ತಿರಲಿಲ್ಲ. 1 ನೇ ಆರೋಪಿಯ ಮನೆಗೆ 2 ತಿಂಗಳಿಗೊಮ್ಮೆ ಹಾಗೂ ವಾರಕ್ಕೊಮ್ಮೆ ಹೋದಾಗಲೂ ಅಲ್ಲಿಯೂ ಜಗಳ ಮಾಡುತ್ತಿದ್ದರು. ಅವರ ತಾಯಿಯವರು (3 ನೇ ಆರೋಪಿ) ನನಗೆ ಎಷ್ಟೊ ಭಾರಿ ನಿನಗೆ ಆಗದಿದ್ದರೆ ಹೇಳು ನಾನೂ ಕೂಡ ಲಾಯರ್ ಇದ್ದು ನಿನಗೆ ವಿಚ್ಛೇಧನ ಕೊಡಿಸುತ್ತೇನೆ ಎಂದು ಹೇಳುತ್ತಿದ್ದರು. 1 ನೇ ಆರೋಪಿಯು ನನಗೆ ನಿಮ್ಮ ಪೋಷಕರ ಬಳಿ ಜಮೀನು ಅಥವಾ ಏನನ್ನಾದರೂ ಕೇಳು ನಾವು ಪ್ರತ್ಯೇಕವಾಗಿ ಏನನ್ನಾದರೂ ಮಾಡೋಣ ಎಂದು ಹೇಳುತ್ತಿದ್ದರು. ಮದುವೆಯಾದ ಹೊಸದರಲ್ಲಿ ನಾನು ಎಲ್ಲಿಗೆ ಕರೆದರೂ ಬರುತ್ತಿದ್ದಿರಲಿಲ್ಲ ನಾನು ಒಬ್ಬಳೆ ಹೋಗುತ್ತಿದ್ದೆನು.

ನನ್ನ ತಂದೆಯವರು ನನ್ನ ತಮ್ಮನ ನೆನಪಿಗಾಗಿ ಬೆಳಗುಂಬದಲ್ಲಿ ಒಂದು ಸ್ಮಾರಕವನ್ನು ನಮ್ಮ ಹೊಲದಲ್ಲಿ ಕಟ್ಟಿರುತ್ತಾರೆ. ಆ ಸಲುವಾಗಿ 1 ನೇ ಆರೋಪಿಯು ನನ್ನ ಬಳಿ ಏನಕ್ಕೆ ಅಷ್ಟು ಹಣ ಖರ್ಚು ಮಾಡಿ ಕಟ್ಟುತ್ತಿದ್ದಾರೆ ಎಂದು ಜಗಳ ಮಾಡಿದ್ದರು. ಸ್ಮಾರಕ ಕಟ್ಟಲು ಪ್ರಾರಂಭ ಮಾಡಿದಾಗ ಪೂಜೆಗೂ 1 ನೇ ಆರೋಪಿಯು ಬಂದಿರಲಿಲ್ಲ. ಸದರಿ ಸ್ಮಾರಕವನ್ನು ನಿರ್ಮಿಸುವ ಸಲುವಾಗಿ ಬೆಳಗುಂಬದಲ್ಲಿ ಮನೆಯನ್ನು ಮಾಡಿದ್ದಿರಲಿಲ್ಲ ಆ ಕಾರಣದಿಂದ ನನ್ನ ತಂದೆ ತಾಯಿ ಮಾಗಡಿಯ ನಮ್ಮ ಬಾಡಿಗೆ ಮನೆಯಲ್ಲಿ 3 ದಿನಗಳ ಕಾಲ ಇದ್ದರು.

ನನಗೆ ಸಂಜೆ  5.00 ಗಂಟೆಯವರೆಗೆ ಕೆಲಸ ಇರುತ್ತದೆ, ನಾನುಅರ್ಧ ದಿನದ ಕೆಲಸವನ್ನು ಮುಗಿಸಿಕೊಂಡು ಸ್ಮಾರಕದ ಕೆಲಸವನ್ನು ನೋಡಲು ಹೋಗಿದ್ದೆನು. ಆ ದಿನ ಗ್ರಾನೇಟ್ ಅನ್ನು ಹಾಕುತ್ತಿದ್ದರು. ಊರಿನಲ್ಲಿ ಲೇಟ್ ಆಗಿದ್ದರಿಂದ ನಾನು  1 ನೇ ಆರೋಪಿಗೆ ಪೋನ್ ಮಾಡಿ ನಾನು  ನನ್ನ ತಂದೆಯವರ ಜೊತೆ ಹೋಗುತ್ತಿದ್ದೇನೆ ಎಂದು ಕೇಳಿದೆನು.  ನಂತರ ನಾನು ಮತ್ತು ನಮ್ಮ ತಂದೆ ತಾಯಿಯವರು ರಾತ್ರಿ  8.30 ಕ್ಕೆ ಮಾಗಡಿಯ ಮನೆಗೆ ಬಂದೆವು.  ನಾನಗಿ ನನ್ನ ಪೋಷಕರಿಗೆ ಏನು ಕೇಳುತ್ತಿಲ್ಲ ಎಂದು  1 ನೇ ಆರೋಪಿಯು ಜೋರಾಗಿ ನನ್ನ ತಂದೆ ತಾಯಿಯವರಿಗೆ ಗಲಾಟೆ ಮಾಡಿದರು. ನನ್ನ ತಂದೆಯವರ ಕೊರಳ ಪಟ್ಟಿಯನ್ನು  ಹಿಡಿದು ಹೊರಗೆ ತಳ್ಳಿದರು. ಆ ದಿನ ರಾತ್ರಿಯೇ ನಾನು ನನ್ನ ತಂದೆಯವರ ಜೊತೆ ಹೊರಟು ಯಲಿಯೂರಿಗೆ ಹೋಗಿರುತ್ತೇನೆ.  ಅದರಿಂದ ಆಚೆ ಆರೋಪಿಗಳು  ನನಗೆ ನೇರವಾಗಿ ಸಂಪರ್ಕಿಸಿರುವುದಿಲ್ಲ ,ಬೇರೆಯವರಿಂದ ಅಂದರೆ ಮಧ್ಯವರ್ತಿಗಳಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಹೇಳಿಕಳುಹಿಸುತ್ತಿದ್ದರು.  1 ನೇ ಆರೋಪಿಯು ನನಗೆ ಪೋನ್ ಮಾಡಿ ನಾನು ಏನು ಕೇಳುತ್ತಿದ್ದೇನೊ ಅದನ್ನು ನಿಮ್ಮ ತಂದೆ ತಾಯಿಯವಂರಿಂದ ಪಡೆದು ನೀನೊಬ್ಬಳೇ ಬರುವುದಾದರೆ ಬಾ ಎಂದು ಹೇಳುತ್ತಿದ್ದನು. ಇದಾದ 3 ತಿಂಗಳ ನಂತರ ನಾನು ಬೆಂಗಳೂರಿನ ನಮ್ಮ ಮನೆಯ ಹತ್ತಿರ ಇರುವ ಅಂಜನಾನಗರದ ಪೆಟ್ ಕ್ಲಿನಿಕ್ ನಲ್ಲಿ  ವೈದ್ಯಾಧಿಕಾರಿಯಾಗಿ ಕೆಲಸಕ್ಕೆ ಸೇರಿರುತ್ತೇನೆ.  ಆ ಸುಮಯದಲ್ಲಿ ನಾವು ಈ  ವಿಚಾರವಾಗಿ ಏನು ಮಾಡಬಹುದೆಂದು ವಕೀಲರನ್ನು ಬೇಟಿಯಾಗಿರುತ್ತೇವೆ. 1 ನೇ ಆರೋಪಿಯು ಪೋನಿನಲ್ಲಿ ನನಗೆ ಜಾಸ್ತಿ  ಬೆದರಿಕೆ ಹಾಕುತ್ತಿದ್ದರಿಂದ ದಿನಾಂಕ 03.09.2021 ರಂದು  ಮಾದನಾಯಕನಹಳ್ಳಿ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ.

ಈಗ ಸಾಕ್ಷಿಗೆ  ದೂರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು  ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು  ನೀಡಿದ

ಮಾರನೆ ದಿನ ಪೋಲಿಸರು ನಾವು ಬಾಡಿಗೆ ಮನೆಯಲ್ಲಿ ಇದ್ದ ಶ್ರೀನಿಧಿ ಲೇಔಟ್ ಗೆ ಬಂದು ಮಹಜರನ್ನು ಜರುಗಿಸಿರುತ್ತಾರೆ. ಸದರಿ ಮಹಜರನ್ನು ಎಷ್ಟು ಗಂಟೆಗೆ ಜರುಗಿಸಿರುತ್ತಾರೆ ಎಂದು ನಿರ್ಧಿಷ್ಟವಾಗಿ ಸಮಯ ಗೊತ್ತಿರುವುದಿಲ್ಲ ಆದರೆ 200 ಅಥವಾ 2.30 ಗಂಟೆ ಆಗಿತ್ತು. ಮಹಜರ್ ಸಮಯದಲ್ಲಿ ಚಾಸಾ- 11 ಮತ್ತು 12 ರವರು ಹಾಜರು ಇದ್ದರು.

ಈಗ ಸಾಕ್ಷಿಗೆ ದಿನಾಂಕ 04.09.2021 ರ ಸ್ಥಳಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸ್ಥಳಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣವು ಮಾದನಾಯಕನಹಳ್ಳಿ ವ್ಯಾಪ್ತಿಗೆ ಬರುವುದಿಲ್ಲವೆಂದು ಮಾಗಡಿ ವ್ಯಾಪ್ತಿಗೆ ಬರುತ್ತದೆ ಎಂದು ಮಾಗಡಿ ಪೋಲಿಸ್ ಠಾಣೆಗೆ ಪ್ರಕರಣವನ್ನು ವರ್ಗಾಯಿಸಿರುತ್ತಾರೆ. ಮಾಗಡಿ ಪೋಲಿಸ್ ಠಾಣೆಗೆ ದೂರು ವರ್ಗಾವಣೆಯಾದ ನಂತರ ಪೋಲಿಸರು ನಮಗೆ ಪೋನ್ ಮಾಡಿ ತಿಳಿಸಿದರು. ಅಕ್ಟೋಬರ್ 2021 ರಲ್ಲಿ ಮಾಗಡಿ ಪೋಲಿಸರು ಬಂದು ಶ್ರೀನಿಧಿ ಲೇಔಟ್ ನಲ್ಲಿ ಇರುವ ಬಾಡಿಗೆ ಮನೆಗೆ ಬಂದು ಮಹಜರನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-11 ಮತ್ತು 12 ರ ವರು ಹಾಜರು ಇದ್ದರು. ಸದರಿ ಮಹಜರನ್ನು ಮಧ್ಯಾಹ್ನ 1.30 ರ ಸಮಯದಲ್ಲಿ ಜರುಗಿಸಿರುತ್ತಾರೆ.

ಈಗ ಸಾಕ್ಷಿಗೆ ದಿನಾಂಕ 09.10.2021 ರ ಮಹಜರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಮಹಜರನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದೋಷಾರೋಪಣ ಪಟ್ಟಿ ಸಲ್ಲಿಸುವಾಗ ವಿವಾಹ ಆಮಂತ್ರಣ ಪತ್ರಿಕೆ , ಮದುವೆ ಪೋಟೋಗಳು ಹಾಗೂ ನಾನು 1 ನೇ ಆರೋಪಿಗೆ ಹಣವನ್ನು ವರ್ಗಾವಣೆಮಾಡಿದ ಬಗ್ಗೆ ದಾಖಲೆಗಳನ್ನು ಹಾಗೂ ಒಡವೆ ಮಾಡಿಸಿಕೊಟ್ಟ ಬಗ್ಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. 4

ಪೋಟೋಗಳನ್ನು ನಿಪಿ-5, ನಿಪಿ-6, ನಿನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ಸಿ ಡಿ ಯನ್ನು ನಿಪಿ- 9 ಎಂದು ಗುರುತಿಸಲಾಯಿತು. ರಸೀದಿಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಪಿರ್ಯಾದುದಾರರ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ಹಾಜರು ಪಡಿಸಿದ್ದು ನಿಪಿ-12 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 4 ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋಗಳನ್ನು ಮಹಜರ್ ಸಮಯದಲ್ಲಿ ತೆಗೆದಿದ್ದು ಎಂದು ನುಡಿಯುತ್ತಾರೆ, ಸದರಿ ಪೋಟೋಗಳನ್ನು ನಿಪಿ-13 , ನಿಪಿ-14, ನಿಪಿ-15 ಮತ್ತು ನಿಪಿ-16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- ಶ್ರೀ.** ವಕೀಲರಿಂದ **ಆರೋಪಿಗಳ** ಪರವಾಗಿ :-

ಈ ಹಂತದಲ್ಲಿ ಪಾಟೀಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 3372 /2022**
**ಚಾಸಾ :- 01 / ಪ್ರಾಸಾ :- 01**

**ದಿನಾಂಕ : 12.01.2024 ರಂದು** ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಆರೋಪಿತರ ಪರ ಶ್ರೀ. LGG . ವಕೀಲರಿಂದ :-**

ನೀವು ಹಾಗೂ 1 ನೇ ಆರೋಪಿಯು ಒಂದೇ ಕಡೆ ಕೆಲಸ ಮಾಡುತ್ತಿದ್ದು, ನಿಮ್ಮ ಇಬ್ಬರ ನಡುವೆ ಬಾಂದವ್ಯ ಬೆಳೆದ ನಂತರ ನಿಮ್ಮ ಮನೆಯವರಿಗೆ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವುಗಳೆ ನಿಮ್ಮ ನಿಮ್ಮ ಮನೆಯಲ್ಲಿ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ನಿಮ್ಮ ಮನೆಯವರಿಗೆ ವಿಚಾರವನ್ನು ತಿಳಿಸುವ ಮೊದಲು ಎಷ್ಟು ದಿವಸಗಳ ಕಾಲ ನಿಮ್ಮ ಹಾಗೂ 1 ನೇ ಆರೋಪಿಯ ನಡುವೆ ಒಡನಾಟ ಇತ್ತು ಎಂದರೆ ಸಾಕ್ಷಿ 2-3 ತಿಂಗಳ ಮುಂಚೆ ಎಂದು ನುಡಿಯುತ್ತಾರೆ. ಸದರಿ 3 ತಿಂಗಳಲ್ಲಿ 1 ನೇ ಆರೋಪಿಯನ್ನು ವಿವಾಹವಾಗಲು ನಿಮಗೆ ಸರಿ ಅನ್ನಿಸಿತ್ತೆ ಎಂದರೆ ಸಾಕ್ಷಿಯು ಸರಿ ಅನ್ನಿಸಿತ್ತು ಎಂದು ನುಡಿಯುತ್ತಾರೆ. ಸದರಿ 1 ನೇ ಆರೋಪಿಯನ್ನು ಮದುವೆಯಾಗುವ ಮೊದಲು ಅವರ ಕುಟುಂಬದವರ ಬಗ್ಗೆ ಏನು ತಿಳಿದುಕೊಂಡಿರುತ್ತೀರಿ ಎಂದರೆ ಸಾಕ್ಷಿ ತಿಳಿದುಕೊಂಡಿರುವುದಿಲ್ಲವೆಂದು ನುಡಿಯುತ್ತಾರೆ. ನಿಶ್ಚಿತಾರ್ಥ ಆದ ನಂತರ 1 ನೇ ಆರೋಪಿಯ ಕುಟುಂಬದವರಲ್ಲಿ ಏನನ್ನು ನೋಟೀಸ್ ಮಾಡಿರುತ್ತೀರಿ ಎಂದರೆ ಸಾಕ್ಷಿ ನಿಶ್ಚಿತಾರ್ಥ ದ ನಂತರ ಮದುವೆಯನ್ನು ಆದಷ್ಟು ಬೇಗ ದೇವಸ್ಥಾನಲ್ಲಿ ಸರಳವಾಗಿ ಮಾಡಿಕೊಡಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿಯವರ ಹೇಳಿಕೆಗೆ 1 ನೇ ಆರೋಪಿಯು ಸಮ್ಮತಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

2 ನೇ ಆರೋಪಿಯು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಸರ್ಕಾರಿ ಶಿಕ್ಷಕರು ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಎಲ್ಲಿ ಕೆಲಸ ಮಾಡುತ್ತಾರೆ ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ನಿರ್ಧಿಷ್ಟವಾಗಿಗೊತ್ತಿರುವುದಿಲ್ಲ ಆದರೆ ಮಂಡ್ಯ ಸುತ್ತಮುತ್ತದಲ್ಲಿ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. 3 ನೇ ಆರೋಪಿಯು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ವಕೀಲರು ಎಂದು ನುಡಿಯುತ್ತಾರೆ, ಸದರಿಯವರು ಎಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಾರೆ ಎಂದರೆ ಸಾಕ್ಷಿ ಎಲ್ಲಾ ಕಡೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳ ಮನೆ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ಮಂಡ್ಯದ ಎತ್ತಗದಹಳ್ಳಿಯಲ್ಲಿ ಎಂದು ನುಡಿಯುತ್ತಾರೆ. ಆರೋಪಿಗಳ ಜೊತೆ ಇನ್ನು ಯಾರು ವಾಸಮಾಡುತ್ತಾರೆ ಎಂದರೆ ಸಾಕ್ಷಿ 1 ನೇ ಆರೋಪಿಯ ತಂಗಿ ಇದ್ದು ಸದರಿಯವರು ಆಯುರ್ವೇದ ಡಾಕ್ಟರ್ ಎಂದು ನುಡಿಯುತ್ತಾರೆ. ಸದರಿ ಆರೋಪಿಗಳು ಹಾಗೂ 1 ನೇ ಆರೋಪಿಯ ತಂಗಿ ಎಲ್ಲರೂ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ 1 ನೇ ಆರೋಪಿಯ ಮದುವೆ ಆದ ನತಂರ 2 ಮತ್ತು 3 ನೇ ಆರೋಪಿಗಳು ಹಾಗೂ 1 ನೇ ಆರೋಪಿಯ ತಂಗಿಯವರು ಮಂಡ್ಯದ ಎತ್ತಗದಹಳ್ಳಿಯಲ್ಲಿ ವಾಸ ಇರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಸದರಿ ಎತ್ತಗದಹಳ್ಳಿಯಲ್ಲಿ 1 ನೇ ಆರೋಪಿಯೊಂದಿಗೆ ಎಷ್ಟು ತಿಂಗಳ ಕಾಲ ವಾಸ ಇದ್ದಿರಿ ಎಂದರೆ ಸಾಕ್ಷಿ ಒಂದು ವಾರಗಳ ಕಾಲ ಎಂದು ನುಡಿಯುತ್ತಾರೆ. ಮದುವೆಆದ ನಂತರ ನಿಮ್ಮ ಪೋಷಕರ ಮನೆಯಲ್ಲಿ ನೀವು ಹಾಗೂ 1 ನೇ ಆರೋಪಿಯು ಎಷ್ಟು ತಿಂಗಳ ಕಾಲ ವಾಸ ಇದ್ದಿದ್ದಿರಿ ಎಂದರೆ ಸಾಕ್ಷಿ 1 ತಿಂಗಳ ಕಾಲ ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಮನೆಯನ್ನು ಪಡೆದಿದ್ದು 1 ನೇ ಆರೋಪಿಯೇ ಆ ಸಂಬಂಧ ನೀವು ದಾಖಲೆಗಳನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ತಿಂಗಳ ಕಾಲ ಮಾಗಡಿಯ ಬಾಡಿಗೆ ಮನೆಯಲ್ಲಿ ವಾಸ

ಇದ್ದಿದ್ದಿರಿ ಎಂದರೆ ಸಾಕ್ಷಿ 5 ತಿಂಗಳ ಕಾಲ ಎಂದು ನುಡಿಯುತ್ತಾರೆ. ಸದರಿ 5 ತಿಂಗಳ ಕಾಲ 1 ನೇ ಆರೋಪಿಯು ಸದರಿ ಬಾಡಿಗೆ ಮನೆಯ ಬಾಡಿಗೆ ಹಣವನ್ನು ಕೊಡುತ್ತಿದ್ದರು ಎಂದರೆ ಸಾಕ್ಷಿ ನಾನು ನನ್ನ ಸಂಬಳದಲ್ಲಿ ಬದ ಹಣವನ್ನು ಆನ್ಲೈನ್ ಮೂಲಕ ವರ್ಗಾವಣೆ ಮಾಡುತ್ತಿದ್ದು 1 ನೇ ಆರೋಪಿಯೇ ಬಾಡಿಗೆ ಹಣವನ್ನು ಪಾವತಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ಆರೋಪಿಯೂ ಸಹ ನೀವು ಏನು ಸಂಬಳವನ್ನು ಪಡೆಯುತ್ತಿದ್ದಿರೋ ಅದೇ ಸಂಬಳವನ್ನು ಪಡೆಯುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬಾಡಿಗೆ ಹಣವನ್ನು ನಿಮ್ಮ ಸಂಬಳದಿಂದ ಕೊಟ್ಟಿರುತ್ತಾರೋ ಅಥವಾ 1 ನೇ ಆರೋಪಿಯ ಸಂಬಳದಿಂದ ಕೊಟ್ಟಿರುತ್ತಾರೋ ಎಂದು ನೀವು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಕೊನೆಯ ಭಾರಿ ಯಾವ ದಿನದಂದು ಸದರಿ ಬಾಡಿಗೆ ಮನೆಯಲ್ಲಿ ವಾಸ ಇದ್ದಿದ್ದು ಎಂದರೆ ಸಾಕ್ಷಿ ದಿನಾಂಕ 26.06.2021 ಎಂದು ನುಡಿಯುತ್ತಾರೆ. ಸದರಿ ದಿನದಂದು ಬಾಡಿಗೆ ಮನೆಯಿಂದ ಬಂದ ನಂತರ ಇಲ್ಲಿಯವರೆಗೂ ಬಾಡಿಗೆ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೋಗಿರುವುದಿಲ್ಲ ಮಹಜರ್ ಕಾಲದಲ್ಲಿ ಮಾತ್ರ ಬಂದಿದ್ದೆನು ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಮನೆಯಿಂದ ಬಂದ ನಂತರ ನೀವು ಒಬ್ಬಂಟಿಯಾಗಿ ಇದ್ದೀರಾ ಎಂದರೆ ಸಾಕ್ಷಿ ಇಲ್ಲ ನಾನು ನನ್ನ ಪೋಷಕರೊಂದಿಗೆ ಇದ್ದೇನೆ ಎಂದು ನುಡಿಯುತ್ತಾರೆ. ಯಾವ ಸಮಯಕ್ಕೆ ನೀವು ಸದರಿ ಬಾಡಿಗೆ ಮನೆಯನ್ನು ಬಿಟ್ಟು ಹೋಗಿರುತ್ತೀರಿ ಎಂದರೆ ಸಾಕ್ಷಿ ರಾತ್ರಿ 9.30 ರಿಂದ 10.00 ಗಂಟೆ ಮಧ್ಯೆ ಎಂದು ನುಡಿಯುತ್ತಾರೆ. ನೀವು 1 ನೇ ಆರೋಪಿಯು ನನಗೆ ಮತ್ತು ನನ್ನ ಪೋಷಕರಿಗೆ ಮಾನಸಿಕ ಮತ್ತು ದೈಹಿಕ ಚಿತ್ರಹಿಂಸೆ ನೀಡಿದ್ದರಿಂದ ಮನೆಯನ್ನು ಬಿಟ್ಟು ಹೋಗಿರುತ್ತೇನೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ನಿಮ್ಮ ಗಂಡನನ್ನು ಬಿಟ್ಟ ನಂತರವೂ ಮಾಗಡಿಗೆ ಡ್ಯೂಟಿಗೆ ಬರುತ್ತಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಚಿತ್ರಹಿಂಸೆ ನೀಡಿದ ತಕ್ಷಣವೆ ನೀವು ದೂರನ್ನು ಕೊಡಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಪಂಚಾಯ್ತಿ ಏನಾದರೂ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಘಟನೆ ನಡೆದ ನತಂರ ನೀವು 1 ನೇ ಆರೋಪಿಯೊಂದಿಗೆ ನಾರ್ಮಲ್ ಮೆಸೇಜ್ ಹಾಗೂ ವಾಟ್ಸ್ ಆಫ್ ಮೆಸೇಜ್ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೆಸೇಜ್ ಗಳು ಯಾವ ರೀತಿ ಇದ್ದವು ಎಂದರೆ ಸಾಕ್ಷಿ 1 ನೇ ಆರೋಪಿಯು ನಾನು ಮೆಂಟಲಿ ಅಪ್ ಸೆಟ್ ಆಗಿರುತ್ತೇನೆ, ನಾನಾಗಿ ನಾನು ಬರುವುದಿಲ್ಲ, ನೀನಾಗಿ ನೀನು ಬಂದರೆ ಸ್ವೀಕರಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಮೆಸೇಜ್ ಗೆ ನಿಮ್ಮ ಉತ್ತರ ಏನು ಇತ್ತು ಎಂದರೆ ಸಾಕ್ಷಿ 1 ನೇ ಆರೋಪಿಯು ಬಂದು ನನ್ನ ತಂದೆ ತಾಯಿಯವರ ಬಳಿ ಕ್ಷಮೆ ಕೇಳಿದರೆ ಒಪ್ಪಿಕೊಳ್ಳುತ್ತೇನೆ ಎಂದು ಇತ್ತು ಎಂದು ನುಡಿಯುತ್ತಾರೆ. ಸದರಿ ಮೆಸೇಜ್ ಸಂದೇಶವನ್ನು ನಿಮ್ಮ ತಂದೆ ತಾಯಿಯವರೆಗ ಹಾಗೂ 2 ಮತ್ತು 3 ನೇ ಆರೋಪಿಗಳಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕ 03.09.2021 ರ ದೂರನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಬರವಣಿಗೆಯಲ್ಲಿ ಬರೆದುಕೊಟ್ಟಿದ್ದನ್ನು ಹೊನ್ನಪ್ಪ ಎಂಬ ವಕೀಲರು ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೊನ್ನಪ್ಪ ವಕೀಲರಿಗೆ ನೀವು ಎಲ್ಲಿ ವಾಸ ಮಡುತ್ತಿದ್ದೀರಿ ಎಂಬುದನ್ನು ತಿಳಿಸಿದ್ದಿದಿರ ಎಂದರೆ ಸಾಕ್ಷಿ ಹೌದು ತಿಳಿಸಿದ್ದೆನು ಎಂದು ನುಡಿಯುತ್ತಾರೆ. ಹಾಗಾದರೆ ಸದರಿ ಹೊನ್ನಪ್ಪರವರಿಗೆ ಬಾಡಿಗೆ ಮನೆ ವಿಚಾರದ ಬಗ್ಗೆ ಗೊತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಹಾಗೂ

1 ನೇ ಆರೋಪಿಯು ಎಲ್ಲಿ ಕೆಲಸ ಮಾಡುವುದರ ಬಗ್ಗೆ ಹಾಗೂ ವಾಸ ಇರುವುದರ ಬಗ್ಗೆ ವಕೀಲರಿಗೆ ಗೊತ್ತಿತ್ತ ಎಂದರೆ ಸಾಕ್ಷಿ ಗೊತ್ತಿತ್ತು ಎಂದು ನುಡಿಯುತ್ತಾರೆ. ದೂರನ್ನು ಎಲ್ಲಿ ದಾಖಲಿಸಬೇಕು ಎಂದು ಸದರಿ ವಕೀಲರು ನಿಮಗೆ ಮಾಹಿತಿ ಕೊಟ್ಟರೋ ಅಥವಾ ಇಲ್ಲವೋ ಎಂದರೆ ಸಾಕ್ಷಿ ಮಾದನಾಯಕನಹಳ್ಳಿಯಲ್ಲಿ ಕೊಡಿ ಎಂದರು ಅದೇ ರೀತಿ ನಾವು ಮಾದನಾಯಕನಹಳ್ಳಿಯಲ್ಲಿ ಕೊಟ್ಟೆವು ಎಂದು ನುಡಿಯುತ್ತಾರೆ.

ನಿಮ್ಮ ತಂದೆಯವರು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಪೈನಾನ್ಸ್ ಶಿಂದು ನುಡಿಯುತ್ತಾರೆ. ಸದರಿ ಫೈನಾನ್ಸ್ ನೊಂದಣಿಯಾಗಿದೆಯಾ ಎಂದರೆ ಸಾಕ್ಷಿ 10 ವರ್ಷದ ಮೊದಲು ನೋಂದಣಿಯಾಗಿತ್ತು, ಈಗ ನನ್ನ ತಂದೆಯವರು ಬಾಡಿಗೆ ಹಾಗೂ ಕೃಷ್ಟಿ ಆದಾಯವನ್ನು ಮಾತ್ರ ಗಳಿಸುತ್ತಿದ್ದಾರೆ. ನಿಮ್ಮ ತಂದೆಯವರು ರಾಜಕಾರಣಿಯಾಗಿಯೂ ಮಾಗಡಿಯಲ್ಲಿ ಗುರುತಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಮಾಗಡಿ ಮತ್ತು ನೆಲಮಂಗಲದಲ್ಲಿ ಇನ್ಫ್ಲುಯನ್ಸ್ ವ್ಯಕ್ತಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಇನ್ಫ್ಲುಯನ್ಸ್ ನಿಂದ ನೆಲಮಂಗಲದಲ್ಲಿ ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳ ವಿಚಾರಣೆಯನ್ನು ಮಾಡದೆ ಸದರಿ ಇನ್ಫ್ಲುಯನ್ಸಿನಿಂದ ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮಾಗಡಿ ಪೋಲಿಸ್ ಠಾಣೆಯವರು ಸ್ವೀಕರಿಸಲು ತಿರಸ್ಕರಿಸಿದ್ದರಿಂದ ನೀವು ನೆಲಮಂಗಲದಲ್ಲಿ ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿರ್ಧಿಷ್ಟವಾಗಿ ಯಾವ ಸಮಯದಂದು ನೀವು ಮಹಜರ್ ಗೆ ಪೋಲಿಸ್ ರವರೊಂದಿಗೆ ಸದರಿ ಬಾಡಿಗೆ ಮನೆಗೆ ಬಂದಿರುತ್ತೀರಿ ಎಂದರೆ ಸಾಕ್ಷಿ 2.00 ರಿಂದ

2.30 ರ ಮಧ್ಯೆ ಎಂದು ನುಡಿಯುತ್ತಾರೆ. ಸದರಿ ಚಾಸಾ-11 ಮತ್ತು 12 ರವರು ನಿಮ್ಮ ಊರಾದ ಬೆಳಗುಂಬದವರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರೆ ಸದರಿ ಚಾಸಾ-11 ಮತ್ತು 12 ರವರನ್ನು ಪೋಲಿಸರೊಂದಿಗೆ ಕಳುಹಿಸಿಕೊಟ್ಟಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ಹಿಂದಿನ ದಿನ ಸದರಿ ಚಾಸಾ-11 ಮತ್ತು 12 ರವರಿಗೆ ನೀವೆ ಮಹಜರ್ ಗೆ ಬರಬೇಕು ಎಂದು ನೋಟಿಸ್ ಕೊಟ್ಟಿರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚಾಸಾ-11 ಮತ್ತು 12 ರವರನ್ನು ನಿಮ್ಮ ತಂದೆಯವರೆ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಪೋಲಿಸರು ಇಬ್ಬರು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ಹೇಳಿದ್ದರಿಂದ ನಾವೇ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮ ಜೊತೆ ಬಂದಿದ್ದ ಇಬ್ಬರು ಸಾಕ್ಷಿಗಳನ್ನು ಬಿಟ್ಟರೆ ಸದರಿ ಬಿಲ್ಡಿಂಗ್ ನಲ್ಲಿ ಯಾರನ್ನೂ ಕರೆದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ 4 ಜನರನ್ನು ಹೊರತುಪಡಿಸಿ ಸದರಿ ಬಿಲ್ಡಿಂಗ್ ನಲ್ಲಿ ಇದ್ದ ಜನರಿಗೆ ನೀವು ಬರುವುದರ ಬಗ್ಗೆ ಮಾಹಿತಿ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ನೀವು ಸದರಿ ಬಿಲ್ಡಿಂಗ್ ನಲ್ಲಿ ಇದ್ದ ಯಾವುದಾದರೂ ವ್ಯಕ್ತಿಗಳಿಗೆ ಪಂಚನಾಮೆಗೆ ಸಹಿ ಮಾಡಲು ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಆರೋಪಿತರ ಪರ ವಕೀಲರು ಕಾಲಾವಕಾಶ ಕೇಳಿದ್ದು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**